ಶ್ರೀ ಪಿ. ಎಸ್. ಜಯವಂತ್ :- ಮಾನ್ಯ ಅಧ್ಯಕ್ಷರೇ, ಉತ್ತರ ಕನ್ನಡ ಜಿಲ್ಲೆಯಲ್ಲಿ ಅರಣ್ಯಗಳಲ್ಲಿ ಮರಗಳನ್ನು ಕಡಿಯುವುದು, ಮರಗಳ ಸಾಗಾಣಿಕೆ, ಜಲಾವು ಸಾಗಾಣಿಕೆ, ಜಲಾವು ಡಿಪೋ ನಡೆಸುವುದು, ಇತ್ಯಾದಿ ಗುತ್ತಿಗೆ ನೀಡುವಾಗ ನೇರವಾಗಿ ಜಿಲ್ಲಾ ಕೂಲಿಕಾರರ ಸಂಘಕ್ಕೆ ಕೊಡುತ್ತಿರುವುದು ನಿಮ್ಮ ಗಮನಕ್ಕೆ ಬಂದಿದೆಯೇ? ಹರಾಜು ಮಾಡದೇ ಗುತ್ತಿಗೆ ಕೊಡುತ್ತಿರುವುದರಿಂದ ಉತ್ತರ ಕನ್ನಡ ಜಿಲ್ಲೆಗೆ ಒಂದು ವರ್ಷಕ್ಕೆ ಸುಮಾರು 75 ಲಕ್ಷ ರೂ. ಗಳ ಲುಕ್ಸಾನು ಆಗಬಹುದು ಮತ್ತು ಅಲ್ಲಿಯ ಅಧಿಕಾರಿಗಳು ಭ್ರಷ್ಟರಾಗುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ? ಈ ನಷ್ಟವನ್ನು ತಡೆಯಲು ಕ್ರಮ ತೆಗೆದುಕೊಳ್ಳುವ ವಿಚಾರ ತಮ್ಮ ಮುಂದಿದೆಯೇ?

11-10 ಎ. ಎಂ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ :- ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಉತ್ತರ ಕನ್ನಡ ಜಿಲ್ಲೆಯಲ್ಲಿ ಎಷ್ಟು ಹಣ ಬರುತ್ತಿದೆ ಎಂದು ಕೇಳಿದ್ದಾರೆ. ಅದರ ಬಗ್ಗೆ ಉತ್ತರವನ್ನು ಸರಿಯಾಗಿ ಹೇಳಿದ್ದೇವೆ. ಯಾವ್ಯಾವುದು ಎಷ್ಟೆಷ್ಟು ಆಗಿದೆ ಎನ್ನುವ ಬಾಬ್ತು ಕೂಡ ತಮಗೆ ತಿಳಿಸಲಾಗಿದೆ. ನಂತರ ಸಂಘದವರ ಬಗ್ಗೆ ಹೇಳಿದಿರಿ, ಸಂಘದವರಿಗೆ ಏನೂ ಆದಾಯವಿಲ್ಲ, ಕೂಲಿಕಾರರಾಗಿ ಅವರು ಏನು ಮಾಡುತ್ತಾರೆ ಅಂಥ ಕೆಲಸಕ್ಕೆ ಅವರುಗಳನ್ನು ತೆಗೆದುಕೊಳ್ಳುತ್ತೇವೆ. ಅವರ ಕಡೆಯಿಂದ ಲಾಭ ಬರ ತಕ್ಕಂಥಾದ್ದು ಏನೂ ಇಲ್ಲ. ನಮಗೆ ಅವರಿಂದ ಏನೂ ಆದಾಯ ಬರುವುದಿಲ್ಲ.

ಶ್ರೀ ಪಿ. ಎಸ್. ಜೈಯವಂತ್ :- ಗುತ್ತಿಗೆಯನ್ನು ತಾವು ಅಲ್ಲಿಯ ಜಿಲ್ಲಾ ಸಂಘಕ್ಕೆ ಕೊಡುತ್ತಿದ್ದೀರಿ. ಆದರಲ್ಲಿ ಮನಾಪಲಿ ನಡೆಯುತ್ತಿದೆ. ಅದನ್ನು ಕೂಲಿಕಾರರ ಎಲ್ಲಾ ಸಂಘಗಳಿಗೆ ಕೊಡುವಂತಹ ವ್ಯವಸ್ಥೆ ಮಾಡಿ. ಹಾಗೆ ಮಾಡಿದರೆ ಹಲವಾರು ಕೂಲಿಕಾರರ ಸಂಘಗಳು ಸಹ ಬದುಕುವುದಕ್ಕೆ ಅವಕಾಶವಾಗುತ್ತದೆ. ಇದರಿಂದ ಹೆಚ್ಚಿನ ಆದಾಯ ಸಹ ಸರ್ಕಾರಕ್ಕೆ ಬರುತ್ತದೆ. ಉತ್ತರ ಕನ್ನಡ ಜಿಲ್ಲೆಯಲ್ಲಿ 75 ಲಕ್ಷ ರೂಪಾಯಿ ಲುಕ್ಸಾನು ಆಗಿರುವುದು ತಮ್ಮ ಗಮನಕ್ಕೆ ಬಂದಿದೆಯೇ ಎಂದು ಕೇಳುತ್ತಿದ್ದೇನೆ. ಇದರ ಬಗ್ಗೆ ತಾವು ಏನು ಮಾಡುತ್ತೀರಿ ಎಂದು ಹೇಳಬೇಕಾಗಿದೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ :- ಇದು ನನ್ನ ಗಮನಕ್ಕೆ ಬಂದಿಲ್ಲ. ಇದರ ಬಗ್ಗೆ ಪರಿಶೀಲಿಸಿ ಏನಾದರೂ ಸಾಧ್ಯವಾದ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮಾಲಕ ನೀಡಲಾದ ಉತ್ತರಗಳು.

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು) :- ಮಾನ್ಯ ಅಧ್ಯಕ್ಷರೇ, ದಿನಾಂಕ 31 ನೇ ಜುಲೈ 1996 ರಂದು ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳ 18 ನೇ ಪಟ್ಟಿಯಲ್ಲಿರುವ 69 ಪ್ರಶ್ನೆಗಳ ಪೈಕಿ 50 ಪ್ರಶ್ನೆಗಳಿಗೆ ಉತ್ತರವನ್ನು ಸದನದಲ್ಲಿ ಮಂಡಿಸುತ್ತೇನೆ.